**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ,</u>**

**<u>ಕಡೂರು</u>**

**ಸಿ.ಸಿ.ನಂ.542/2020**

**ದಿನಾಂಕಃ08.04.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯೂಃ1 ಸಿ.ಡಬ್ಲ್ಯೂಃ1

| | |
|---|---|
| ಸಾಕ್ಷಿಯ ಹೆಸರು | ಃ ರೇಣುಕಾರಾಧ್ಯ |
| ತಂದೆಯ ಹೆಸರು | ಃ ಗಂಗಾಧರಯ್ಯ |
| ವಯಸ್ಸು | ಃ 30 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ಬೀರೂರು |

**<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ</u>**

ಮೃತ ಗಂಗಾಧರಯ್ಯ ನನ್ನ ತಂದೆ, ಅವರು 1 ವರ್ಷದ ಹಿಂದೆ ಅಪಘಾತದಿಂದ ಮೃತಪಟ್ಟಿರುತ್ತಾರೆ. ನಾವು ವ್ಯವಸಾಯ ಮತ್ತು ಹೈನುಗಾರಿಕೆಯನ್ನು ಮಾಡಿಕೊಂಡು ಬರುತ್ತಿದ್ದೇವೆ. ಬೀರೂರಿನಿಂದ ಯಗಟಿ ರಸ್ತೆಯಲ್ಲಿ ಹುಲ್ಲೇಹಳ್ಳಿ ಗೇಟಿನ ಬಳಿ ನಮ್ಮ ಹಸುಗಳ ಫಾರಂ ಮತ್ತು ಜಮೀನು ಇರುತ್ತದೆ, ಸದರಿ ಫಾರಂ ನಮ್ಮ ಮನೆಯಿಂದ ಸುಮಾರು 2 ರಿಂದ 3 ಕಿಲೋ ಮೀಟರ್ ದೂರ ಇರುತ್ತದೆ. ಸದರಿ ಫಾರಂ ಅನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ದಿಃ26.02.2020 ರಂದು ಪ್ರತಿದಿನದಂತೆ ನನ್ನ ತಂದೆ ಮನೆಯಿಂದ ಫಾರಂಗೆ ಸಂಜೆ 5.30 ಕ್ಕೆ ಬಂದಿರುತ್ತಾರೆ. ನಾನು ಮತ್ತು ಚಾಸಾ-9 ರವರು ಆಗಲೇ ಫಾರಂ ನಲ್ಲಿ ಬಂದು ಕೆಲಸ ಮಾಡುತ್ತಿದ್ದೆವು. ನಂತರ ನನ್ನ ತಂದೆ ಫಾರಂನಲ್ಲಿ ಕ್ಲೀನಿಂಗ್ ಕೆಲಸ ಮುಗಿಸಿ ಸಂಜೆ 7.15 ಗಂಟೆಗೆ ಫಾರಂ ನಿಂದ ಮನೆಗೆ ಹೊರಟರು. ಆಗ ಹಸುಗಳಿಗೆ ಫೀಡ್ ಖಾಲಿಯಾಗಿದ್ದರಿಂದ ನಾನು ಮತ್ತು ಚಾಸಾ-9 ರವರು ಇಬ್ಬರೂ ಫೀಡ್ ತರಲು ನನ್ನ ತಂದೆ ಹೋಗುತ್ತಿದ್ದ ವಾಹನ ಹಿಂಬಾಲಿಸಿಕೊಂಡು ನಮ್ಮ ಓಮಿನಿ ವಾಹನದಲ್ಲಿ ಹೋಗುತ್ತಿದ್ದೆವು. ನಮ್ಮ ಓಮಿನಿ ವಾಹನ ಮತ್ತು ನಮ್ಮ ತಂದೆ ಹೋಗುತ್ತಿದ್ದ ಬೈಕಿನ ನಡುವೆ ಸುಮಾರು 20 ರಿಂದ 30 ಅಡಿ ಅಂತರವಿತ್ತು. ನನ್ನ ತಂದೆ ನಿಧಾನವಾಗಿ ರಸ್ತೆಯ ಎಡಬದಿಯಲ್ಲಿ ಬೈಕನ್ನು ಚಲಾಯಿಸಿಕೊಂಡು ಹುಲ್ಲೆಹಳ್ಳಿ ಕಡೆಯಿಂದ ಬೀರೂರು ಕಡೆಗೆ ಹೋಗುತ್ತಿದ್ದರು. ಆಗ ವಿವೇಕಾನಂದ ಹಾಲೋಬ್ರಿಕ್ಸ್ ಎಂಬ ಇಟ್ಟಿಗೆ ಫ್ಯಾಕ್ಟರಿಯ ಸ್ವಲ್ಪ ಮುಂದೆ ಎದುರುಬದಿಯಿಂದ ಅಂದರೆ ಬೀರೂರು ಕಡೆಯಿಂದ ಟಿವಿಸ್ ವಿಕ್ಟರ್ ಬೈಕು ಅತೀವೇಗವಾಗಿ ಬಂದು ನನ್ನ ತಂದೆಯು

ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಬೈಕು ಡಿಕ್ಕಿಪಡಿಸಿದ ಪರಿಣಾಮ ನನ್ನ ತಂದೆ ರಸ್ತೆಯ ಬದಿಯಲ್ಲಿದ್ದ ಟ್ರಂಚ್ ಗೆ ಹೋಗಿ ಬಿದಿದ್ದದರು, ಅವರಿಗೆ ಪ್ರಜ್ಞೆ ತಪ್ಪಿತ್ತು, ಆಗ ನಾನು ಚಾಸಾ-9 ನನ್ನ ತಂದೆಯನ್ನು ಟ್ರಂಚ್ ನಿಂದ ಎತ್ತಿ ಮೇಲೆ ಇಟ್ಟೆವು.

ಸದರಿ ಅಪಘಾತವಾದ ನಂತರ ಒಬ್ಬ ವ್ಯಕ್ತಿ ಓಡಿಹೋಗಿರುತ್ತಾನೆ ಮತ್ತೊಬ್ಬ ವ್ಯಕ್ತಿ ಕಾಲು ಮುರಿದುಕೊಂಡು ಅಲ್ಲೇ ಬಿದ್ದಿದ್ದನು. ಎರಡೂ ಬೈಕುಗಳು ನುಜ್ಜು ಗುಜ್ಜಾಗಿ ಹೋಗಿದ್ದವು. ಆಗ ನಾನು ಮತ್ತು ಚಾಸಾ-9 ರವರು ನನ್ನ ತಂದೆಯನ್ನು ನನ್ನ ಓಮಿನಿ ವಾಹನದಲ್ಲಿ ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಬೀರೂರು ಆಸ್ಪತ್ರೆಯಲ್ಲಿ ವೈದ್ಯರು ಪರೀಕ್ಷಿಸಿ ನನ್ನ ತಂದೆ ಮೃತಪಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ. ಸದರಿ ಅಪಘಾತದಿಂದ ನನ್ನ ತಂದೆಯವರಿಗೆ ಬಲಗೈ ಮುರಿದಿತ್ತು ಮತ್ತು ಕೆಳಭಾಗದ ದವಡೆ ಸಂಪೂರ್ಣ ನುಜ್ಜಾಗಿತ್ತು. ನಮ್ಮ ತಂದೆ ಆ ದಿನ ಚಲಾಯಿಸುತ್ತಿದ್ದ ಬೈಕಿನ ಸಂಖ್ಯೆ.ಕೆಎ.18.ಆರ್.8968 ಆಗಿತ್ತು. ನನ್ನ ತಂದೆಯ ಬೈಕಿಗೆ ಅಪಘಾತಪಡಿಸಿದ ಬೈಕಿನ ಸಂಖ್ಯೆ.ಕೆಎ.66.ಹೆಚ್9722 ಆಗಿತ್ತು.

ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ದೂರನ್ನು ಠಾಣೆಯಲ್ಲಿ ಜಗದೀಶ್ ಎಂಬುವವರು ಬರೆದಿರುತ್ತಾರೆ. ನನಗೆ ಗಾಬರಿಯಾಗಿ ದೂರು ಬರೆಯಲು ಆಗದೇ ಇರುವ ಕಾರಣ ಸದರಿ ಜಗದೀಶ್ ಅವರೇ ದೂರನ್ನು ಬರೆದಿರುತ್ತಾರೆ. ಅಪಘಾತವಾದ 2-3 ದಿನಗಳ ನಂತರ ಪೋಲೀಸರು ಬೈಕುಗಳ ಮಹಜರ್ ಮಾಡಲು ಠಾಣೆಗೆ ಬನ್ನಿ ಎಂದು ಕರೆದಿದ್ದರು, ನಾನು ಹೋಗಿದ್ದೆ. ಆಗ ಠಾಣೆಯ ಬಳಿ ನನ್ನ ತಂದೆಯ ಬೈಕು ಮತ್ತು ನನ್ನ ತಂದೆಗೆ ಅಪಘಾತಪಡಿಸಿದ ಬೈಕುಗಳು ಇದ್ದವು. ಆಗ ಚಾಸಾ-3,14 ರವರ ಸಮಕ್ಷಮ ಪೋಲೀಸರು ಮಹಜರ್ ಕ್ರಮ ಜರುಗಿಸಿ ಬೈಕುಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಬೈಕುಗಳ ಅಮಾನತ್ತು ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಸಮಯದಲ್ಲಿ ತೆಗೆಯಲಾದ 2 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು. ಆ ದಿನ ಅಪಘಾತಪಡಿಸಿದ ಬೈಕಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಯು ಗೈರು ಹಾಜರಿದ್ದು, ಆರೋಪಿಯ

ಪಿ.ಡಬ್ಲ್ಯೂ:1 ಸಿ.ಡಬ್ಲ್ಯೂ:1

ಪರ ವಕೀಲರು ಅರ್ಜಿ ಸಲ್ಲಿಸಿಕೊಂಡು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಸಿಓವೈ ವಕೀಲರಿಂದ:**

ನಮ್ಮ ಫಾರಂ ನಿಂದ ಘಟನಾ ಸ್ಥಳಕ್ಕೆ ಸುಮಾರು ಒಂದುಕಾಲು ಕಿಲೋ ಮೀಟರ್ ಅಂತರ ಇದೆ. ಅಪಘಾತವು ಬೀರೂರಿನ ಸ್ಮಶಾನನಿಂದ ಯಗಟಿ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಬಳಿ ಆಗಿದೆ ಅಂದರೆ ಸರಿ. ನನ್ನ ತಂದೆಯು ಆ ದಿನ ಸಂಜೆ 7.15 ರ ಸಮಯಕ್ಕೆ ಫಾರಂ ನಿಂದ ಮನೆಗೆ ಹೊರಟರು. ನಿಮ್ಮ ತಂದೆ ಮನೆಗೆ ಹೊರಟಾಗ ನೀವು ಏನು ಮಾಡುತ್ತಿದ್ದೀರಿ? ಅಂದರೆ, ಸಾಕ್ಷಿಯು ನಾವು ಸಹ ಹೊರಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆಯು ಹೊರಟು ಕೆಲವೇ ಸೆಕೆಂಡುಗಳಲ್ಲಿ ನಾವೂ ಸಹ ಹೊರಟಿರುತ್ತೇವೆ. ನಮ್ಮ ಫಾರಂ ನಿಂದ ಅಪಘಾತವಾದ ಸ್ಥಳಕ್ಕೆ ನಡೆದುಕೊಂಡೇ ಬಂದರೂ ಸಹ 10 ರಿಂದ 15 ನಿಮಿಷಕ್ಕೆ ಬರಬಹುದು ಅಂದರೆ ಸರಿ. ನನ್ನ ತಂದೆಗೆ 65 ವರ್ಷ ವಯಾಸ್ಸಾಗಿತ್ತು. ಅಪಘಾತವಾದ ಕಾಲಕ್ಕೆ ನಿಮ್ಮ ತಂದೆ ವಾಹನ ಚಾಲನ ಪರವಾನಗಿಯನ್ನು ಹೊಂದಿದ್ದರ? ಅಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.ಅಪಘಾತವಾದ ಸ್ಥ,ಳಕ್ಕೆ ಚಲಾಯಿಸುತ್ತಿದ್ದ ಬೈಕು ಬೀರೂರು ಕಡೆಯಿಂದ ಬಂದಿತೋ ಅಥವಾ ಬೀರೂರಿನ ಸ್ಮಶಾನ ಒಳಗೆ ಹಾದು ಹೋಗಿರುವ ಮೂಲಕ ಬಂದಿತ್ತೋ ಅಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಘಟನೆಯಾದ ಸ್ಥಳಕ್ಕೆ ನೀವು ಯಾವಾಗ ಬಂದಿರಿ? ಅಂದರೆ, ಸ್ಷಾಯು ಪಘಟನೆ ನನ್ನ ಕಣ್ಣೇದುರು ನಡೆದಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಂದೆ ನಮ್ಮ ಫಾರಂನಿಂದ ಬೈಕನ 20-30 ಕಿಲೋಮೀಟರ್ ವೇಗದಲ್ಲಿ ಚಲಾಯಿಸಿಕೊಂಡು ಹೋಗಿರುತ್ತಾರೆ. 20 ರಿಂದ 30 ಕಿಲೋಮೀಟರ್ ವೇಗದಲ್ಲಿ ಬೈಕನ್ನು ಚಲಾಯಿಸಿಕೊಂಡು ನಮ್ಮ ಫಾರಂನಿಂದ ಘಟನಾ ಸ್ಥಳಕ್ಕೆ ಹೋಗಲು 5 ನಿಮಿಷಗಳು ಸಮಯ ಸಾಕು ಅಂದರೆ ಸರಿ. ನಾನು ಸಹ ನನ್ನ ಓಮಿನಿಯನ್ನು 20 ರಿಂದ 30. ಕಿಲೋ ಮೀಟರ್ ವೇಗದಲ್ಲಿ ಚಲಾಯಿಸಿಕೊಂಡು ಹೋಗುತ್ತಿದ್ದೆನು. ನನ್ನೊಂದಿಗೆ ಓಮಿನಿಯಲ್ಲಿ ಚಾಸಾ-9 ರವರು ಮಾತ್ರ ಇದ್ದರು. ಅಪಘಾತಪಡಿಸಿದ

ನಂತರ ಓಡಿಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿರುವುದ್ದಿ. ಸ್ಮಶಾನದಿಂದ ಹೊರಬರುವ ರಸ್ತೆಯಲ್ಲಿ ಆರೋಪಿ ಮುಖ್ಯ ರಸ್ತೆಗೆ ಬಂದ ಕೂಡಲೇ ಮೃತ ಗಂಗಾಧರಪ್ಪ ಬೀರೂರು ಕಡೆಗೆ ಹೋಗಲು ಹುಲ್ಲೆಹಳ್ಳಿ ಕಡೆಯಿಂ ರಸ್ತೆಯಲ್ಲಿವೇಗವಾಗಿ ಬಂದು ಆರೋಪಿ ಬೈಕಿಗೆ ಡಿಕ್ಕಿಪಡಿಸಿರುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಅಪಘಾತವು ನನ್ನ ತಂದೆಯ ತಪ್ಪಿನಿಂದ ಆಗಿದೆ ಅಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿದ್ದು, ಅವರಿಗೆ ವಾಹನ ಚಾಲನ ಪರವಾನಗಿ ಇಲ್ಲದ ಕಾರಣ ಸರಿಯಾಗಿ ಬೈಕು ಚಲಾಯಿಸಲು ಬಾರದೇ ಅವರೇ ಅಪಘಾತಪಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಅಪಘಾತವನ್ನು ನಾನು ನೋಡಿಲ್ಲ ಅಂದರೆ ಸರಿಯಲ್ಲ. ಅಪಘಾತವು ಆರೋಪಿಯ ನಿರ್ಲಕ್ಷ್ಯತೆಯಿಂದ ಉಂಟಾಗಿಲ್ಲ ಅಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ನಾನು ಇದ್ದಿದ್ದರೆ ನಾನು ಆರೋಪಿಯನ್ನು ಹೋಗಲು ಬಿಡುತ್ತಿರಲಿಲ್ಲ ಅಂದರೆ ಸರಿಯಲ್ಲ. ದೂರು ನೀಡುವ ಸಮಯದಲ್ಲಿ ನೀವು ದುಃಖದಲ್ಲಿದ್ದು, ದೂರಿನ ಅಂಶಗಳನ್ನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ, ಹಾಗಾಗಿ ಜಗದೀಶ್ ಅವರಿಂದ ದೂರು ಬರೆಸಿದ್ದೀರಿ ಅಂದರೆ ಸರಿಯಲ್ಲ. ನೀವು ದೂರನ್ನು ಯಾವಾಗ ಓದಿದಿರಿ ಅಂದರೆ, ಸಾಕ್ಷಿಯು ದೂರನ್ನು ಬರೆದ ಕೂಡಲೇ ಓದಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ತಪ್ಪಿನಿಂದ ಅಪಘಾತವಾಗಿರುವ ಅಪಘಾತವಾಗಿರುವ ಸ್ಥಳವೆಂದು ಬೇರೆ ಸ್ಥಳ ತೋರಿಸಿ ಪೋಲೀಸರಿಗೆ ದೂರು ನೀಡಿದ್ದೇವೆ ಅಂದರೆ ಸರಿಯಲ್ಲ. ನಾನು ಅಪಘಾತವಾದ ಸ್ಥಳದಲ್ಲಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-2ರ ಮಹಜರ್ ನ ಅಂಶಗಳು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಅಪಘಾತವಾದ ಸವುಯದಲ್ಲಿ ನಾನು ಫಾರಂ ನಲ್ಲಿದ್ದುಕೊಂಡು, ಸ್ದಳದಲ್ಲಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗು ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.